NOVEMBER 23, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಮೆಕ್ಕೆಜೋಳ ಹಾಗೂ ಹೆಸರುಕಾಳು ಬೆಲೆಗಳಲ್ಲಿ, ತೀವ್ರ ಕುಸಿತ; ಪ್ರಧಾನಮಂತ್ರಿಯವರ ಮಧ್ಯ ಪ್ರವೇಶಕ್ಕೆ, ಮುಖ್ಯಮಂತ್ರಿ ಪತ್ರ ಮೂಲಕ, ಮನವಿ.
- ಕ್ರೀಡಾ ಯೋಗ; ಬೆಂಗಳೂರಿನ, ನಿಮ್ಹಾನ್ಸ್ ವತಿಯಿಂದ, ಶಾಲಾ ಮಕ್ಕಳಿಗಾಗಿ, ವಿಶೇಷ ಪ್ರಯೋಗ.
- ಧಾರವಾಡದ, ಡಿ.ವಿ. ಹಾಲಭಾವಿ ರಾಷ್ಟ್ರೀಯ ಟ್ರಸ್ಟ್, ಕಲಾತಪಸ್ವಿ ಪ್ರಶಸ್ತಿಗೆ, ಹಿರಿಯ ಕಲಾವಿದ ಬಿ.ಜಿ ಗುಜ್ಜಾರಪ್ಪ, ಆಯ್ಕೆ.
- ಎನ್.ಸಿಸಿ., ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್, 78ನೇ ಸಂಸ್ಥಾಪನಾ ದಿನಾಚರಣೆ, ಇಂದು.

<><><>

ಈಗ ವಾರ್ತೆಗಳ ವಿವರ

<><><>

ಮೆಕ್ಕೆಜೋಳ ಹಾಗೂ ಹೆಸರುಕಾಳು ಬೆಲೆಗಳು, ತೀವ್ರ ಕುಸಿದಿದ್ದು, ಬೆಳೆಗಾರರು ಸಂಕಷ್ಟಕ್ಕೆ ಈಡಾಗಿದ್ದಾರೆ. ಪ್ರಧಾನಮಂತ್ರಿಯವರು ಕೂಡಲೇ ಕ್ರಮ ಕೈಗೊಂಡು, ಸೂಕ್ತ ಬೆಂಬಲ ಬೆಲೆ ಘೋಷಿಸುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಪತ್ರ ಬರೆದು, ಮನವಿ ಮಾಡಿದ್ದಾರೆ. ಕೇಂದ್ರ ಸರ್ಕಾರ, ಪ್ರತಿ ಕ್ವಿಂಟಾಲ್ ಮೆಕ್ಕೆಜೋಳಕ್ಕೆ 2 ಸಾವಿರದ 400 ರೂಪಾಯಿ ಹಾಗೂ ಪ್ರತಿ ಕ್ವಿಂಟಾಲ್ ಹೆಸರುಕಾಳಿಗೆ 8 ಸಾವಿರದ 768 ರೂಪಾಯಿ, ಕನಿಷ್ಟ ಬೆಂಬಲ ಬೆಲೆ ಘೋಷಿಸಿದೆ. ಆದರೆ, ರಾಜ್ಯದ ಮಾರುಕಟ್ಟೆಯಲ್ಲಿ, ಪ್ರಸ್ತುತ ಬೆಲೆಗಳು ಕನಿಷ್ಟ ಬೆಂಬಲ ಬೆಲೆಗಿಂತ ಬಹಳಷ್ಟು ಕಡಿಮೆಯಾಗಿವೆ. ಕಳೆದ ಮೂರು ವರ್ಷಗಳಲ್ಲಿ ಮಾರುಕಟ್ಟೆ ಬೆಲೆಗಳು, ಕನಿಷ್ಟ ಬೆಂಬಲ ಬೆಲೆಗಿಂತ ಹೆಚ್ಚಿದ್ದವು ಎಂದು ಮುಖ್ಯಮಂತ್ರಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

<><><>

ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ, 17 ಲಕ್ಷದ 94 ಸಾವಿರ ಹೆಕ್ಟರ್ ಪ್ರದೇಶದಲ್ಲಿ, ಮೆಕ್ಕೆಜೋಳ ಮತ್ತು 4 ಲಕ್ಷ 16 ಸಾವಿರ ಹೆಕ್ಟರ್ ಕೃಷಿ ಭೂಮಿಯಲ್ಲಿ, ಹೆಸರುಕಾಳು ಬೆಳೆಯಲಾಗಿದೆ.

<><><>

ಕ್ರೀಡಾ ಯೋಗ, ದೈಹಿಕ ಆರೋಗ್ಯ, ಏಕಾಗ್ರತೆ, ಸೃಜನಶೀಲತೆ ಮತ್ತು ಶಾಂತತೆಯಂತಹ ಮಾನಸಿಕ ಸಾಮರ್ಥ್ಯಗಳನ್ನು, ವೃದ್ಧಿಸುತ್ತದೆ ಎಂದು, ರಾಷ್ಟ್ರೀಯ ಮಾನಸಿಕ ಆರೋಗ್ಯ ವಿಜ್ಞಾನಗಳ ಸಂಸ್ಥೆ – ನಿಮ್ಹಾನ್ಸ್‌ನ, ಮನೋವೈದ್ಯಕೀಯ ಸಾಮಾಜಿಕ ಕಾರ್ಯ ವಿಭಾಗದ

ಪ್ರಾಧ್ಯಾಪಕಿ, ಡಾಕ್ಟರ್ ಆರತಿ ಜಗನ್ನಾಥನ್ ಹೇಳಿದ್ದಾರೆ. ನಿಮ್ಹಾನ್ಸ್ ನ 5 ನೇ ಸಮುದಾಯ ಸಂಪರ್ಕ ಅಧಿವೇಶನದ ಹಿನ್ನೆಲೆ, ಯುವ ಮನಸ್ಸುಗಳಿಗಾಗಿ ಕ್ರೀಡಾ ಯೋಗ ಕಾರ್ಯಕ್ರಮವನ್ನು, ರಾಯಲ್ ಪಬ್ಲಿಕ್ ಶಾಲೆಯಲ್ಲಿ, ಉದ್ಘಾಟಿಸಿ ಅವರು ಮಾತನಾಡಿದರು. ನಿಮ್ಹಾನ್ಸ್‌ನ ಮಾನಸಿಕ ಆರೋಗ್ಯ ಶಿಕ್ಷಣ, ಮನೋವೈದ್ಯಕೀಯ ಸಾಮಾಜಿಕ ಕಾರ್ಯ ಮತ್ತು ಕ್ಲಿನಿಕಲ್ ಸೈಕೋಫಾರ್ಮಕಾಲಜಿ ಮತ್ತು ನ್ಯೂರೋಟಾಕ್ಸಿಕಾಲಜಿ ವಿಭಾಗಗಳು ಆಯೋಜಿಸಿದ್ದ ಈ ಅಧಿವೇಶನದಲ್ಲಿ, 7 ರಿಂದ 10ನೇ ತರಗತಿಯ, 93 ವಿದ್ಯಾರ್ಥಿಗಳು ಭಾಗವಹಿಸಿದ್ದರು.

<><><>

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ ಸಂಚಾಲಿತ, ಅರಿವು ಕೇಂದ್ರಗಳು, ಯುವಜನರ ಭವಿ ್ಯ ರೂಪಿಸುವ, ಭರವಸೆಯತಾಣಗಳಾಗಿವೆ ಎಂದು, ಸಚಿವ ಪ್ರಿಯಾಂಕ ಖರ್ಗೆ ಹೇಳಿದ್ದಾರೆ. ಯುವಜನರ ಜ್ಞಾನಾರ್ಜನೆಗೆ ಅಗತ್ಯವಿರುವ, ಸ್ಪರ್ಧಾತ್ಮಕ ಪರೀಕ್ಷೆಯ ಪುಸ್ತಕಗಳು, ಡಿಜಿಟಲ್ ಪರಿಕರಗಳನ್ನು ಪೂರೈಸಿದ್ದು, ಯುವ ಸಮುದಾಯ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದು, ಉದ್ಯೋಗ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುತ್ತಿದ್ದಾರೆ ಎಂದು, ಸಂತಸ ವ್ಯಕ್ತ ಪಡಿಸಿದ್ದಾರೆ.

<><><>

ತುಮಕೂರು ಜಿಲ್ಲೆ, ಮಧುಗಿರಿ ತಾಲೂಕು, ದಬ್ಬೇಘಟ್ಟ ಗ್ರಾಮ ಪಂಚಾಯಿತಿಯ ಅರಿವು ಕೇಂದ್ರದಲ್ಲಿ ಓದಿದ, ಡಿ.ಆರ್. ಸುರೇಶ, ಕೇಂದ್ರದ ಸಿಬ್ಬಂದಿ ನೇಮಕಾತಿ ಆಯೋಗದ, ಕಿರಿಯ ಕರಣಿಕ ಹುದ್ದೆಗೆ, ಆಯ್ಕೆಯಾಗಿದ್ದಾರೆ. ಅವರು ತಮ್ಮ ಖುಷಿ ಹಂಚಿಕೊಂಡಿದ್ದು ಹೀಗೆ..

<><><>

ಡಿ.ಆರ್.ಸುರೇಶ್ ಧ್ವನಿ 40 ಸೆಕೆಂದುಗಳು

<><><>

ಮಹಾತ್ಮ ಗಾಂಧಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ,ಕೇಂದ್ರ ಜಲ ಸಂಪನ್ಮೂಲ ಸಚಿವಾಲಯದ, 'ಜಲ ಸಂಚಯನ್; ಜನ ಭಾಗಿದಾರಿ' ವಿಶೇ ' ಯೋಜನೆಯ, ಪರಿಣಾಮಕಾರಿ ಅನುಷ್ಠಾನಕ್ಕಾಗಿ, ವಿಜಯಪುರ ಜಿಲ್ಲೆಗೆ, ರಾಷ್ಟ್ರೀಯ ಪುರಸ್ಕಾರ ದೊರಕಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ, ಎಕ್ಸ್ ಮಾಧ್ಯಮದಲ್ಲಿ ಖುಷಿ ವ್ಯಕ್ತ ಪಡಿಸಿ, ವಿಜಯಪುರ ಜಿಲ್ಲೆಯಾದ್ಯಂತ, 11 ಸಾವಿರಕ್ಕೂ ಹೆಚ್ಚು, ಚಿಕ್ಕ–ಚಿಕ್ಕ ಚೆಕ್ ಡ್ಯಾಂ, ಬಾಂದಾರಗಳನ್ನು ನಿರ್ಮಿಸಿ, ಮಳೆ ನೀರನ್ನು ಇಂಗಿಸಿದ್ದರಿಂದ, ಅಂತರ್ಜಲ ವೃದ್ಧಿಯಾಗಿದೆ ಎಂದಿದ್ದಾರೆ. ಭಾರತ ಸರ್ಕಾರದ, ಪ್ರತಿಷ್ಠಿತ ಪ್ರಶಸ್ತಿಯನ್ನು, ಜಿಲ್ಲಾ ಪಂಚಾಯಿತಿ ಸಿ.ಇ.ಓ. ರಿಷಿ ಆನಂದ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ, ಹೊಸ ದಿಲ್ಲಿಯಲ್ಲಿ ಸ್ವೀಕರಿಸಿದ್ದಕ್ಕಾಗಿ, ಸಚಿವರು ಅಭಿನಂದಿಸಿದ್ದಾರೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(56 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಧಾರವಾಡದ, ಕುಂಚಬ್ರಹ್ಮ ಡಿ.ವಿ. ಹಾಲಭಾವಿ ರಾಷ್ಟ್ರೀಯ ಟ್ರಸ್ಟ್ ಪ್ರದಾನಿಸುವ, ಕಲಾತಪಸ್ವಿ ಪ್ರಶಸ್ತಿಗೆ, ತುಮಕೂರು ಜಿಲ್ಲೆ, ಶಿರಾ ತಾಲೂಕು, ದೊಡ್ಡ ಬಾಣಗೆರೆಯ, ಹಿರಿಯ ಕಲಾವಿದ ಬಿ.ಜಿ ಗುಜ್ಜಾರಪ್ಪ, 'ಕುಂಚ ಕಲಾಶ್ರೀ ಪ್ರಶಸ್ತಿ'ಗೆ, ಕಲಬುರಗಿಯ ಕಲಾವಿದ

ಚಂದ್ರಹಾಸ ಜಾಲಿಹಾಳ, ಯುವಕುಂಚ ಕಲಾಶ್ರೀ ಪ್ರಶಸ್ತಿಗೆ, ಮುಂಬಯಿಯ ದೀಪಾಲಿ ಸಂದೇಶಖುಲೆ ಹಾಗೂ ಉತ್ತರಕನ್ನಡ ಜಿಲ್ಲೆಯ, ನಾಮದೇವ ಪಟ್ಟೇಕರ ಆಯ್ಕೆಯಾಗಿದ್ದಾರೆ. ಬರುವ 29 ರಂದು, ಧಾರವಾಡದ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಹಿರಿಯ ಕಲಾವಿದ, ಬಿ.ಜಿ ಗುಜ್ಜಾರಪ್ಪ, ತಮ್ಮ ಸಂತಸ ಹಂಚಿಕೊಂಡಿದ್ದಾರೆ..

<><><>

ಬಿ.ಜಿ. ಗುಜ್ಜಾರಪ್ಪ ಧ್ವನಿ 50 ಸೆಕೆಂದುಗಳು

<><><>

ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್, ಎನ್.ಸಿಸಿ. 78ನೇ ಸಂಸ್ಥಾಪನಾ ದಿನವಿಂದು. ಕರ್ನಾಟಕ ಸೇರಿದಂತೆ, ದೇಶಾದ್ಯಂತ ವಿಶೇಷ ಕಾರ್ಯಕ್ರಮಗಳು, ಆಯೋಜನೆಗೊಂಡಿವೆ. ರಾಷ್ಟ್ರ ನಿರ್ಮಾಣ ಮತ್ತು ಯುವಜನತೆಯ ಸುದೃಢ ವ್ಯಕ್ತಿತ್ವ ರೂಪಿಸುವಲ್ಲಿ, ಎನ್.ಸಿ.ಸಿ. ಪಾತ್ರ ಹಿರಿದಾಗಿದೆ. 1948ರಲ್ಲಿ, ಕೇವಲ 20 ಸಾವಿರ ಕೆಡೆಟ್‌ಗಳೊಂದಿಗೆ ಸ್ಥಾಪನೆಯಾದ ಎನ್.ಸಿಸಿ., ಇಂದು 20 ಲಕ್ಷ ಕೆಡೆಟ್‌ಗಳನ್ನು ಹೊಂದಿರುವ, ವಿಶ್ವದ ಅತಿ ದೊಡ್ಡ ಸಮವಸ್ತ್ರಧಾರಿ ಯುವ ಸಂಘಟನೆಯಾಗಿದೆ. ಭಾರತದ 780 ಜಿಲ್ಲೆಗಳ ಪೈಕಿ, 713 ಜಿಲ್ಲೆಗಳಲ್ಲಿ ಎನ್.ಸಿಸಿ. ಕಾರ್ಯನಿರ್ವಹಿಸುತ್ತಿದ್ದು, ರಕ್ತದಾನ ಶಿಬಿರ, ಏಕ್ ಪೇಡ್ ಮಾ ಕೇ ನಾಮ್ ವೃಕ್ಷಾರೋಪಣ ಅಭಿಯಾನ, ಸ್ವಚ್ಛತಾ ಹೀ ಸೇವಾ, ಮಾದಕ ದ್ರವ್ಯ ವಿರೋಧಿ ಜಾಗೃತಿ, ಮುಂತಾದ ಸಾರ್ವಜನಿಕ ಸೇವಾ ಉಪಕ್ರಮಗಳ ಮೂಲಕ, ಗಮನ ಸೆಳೆದ ಯುವ ಸಂಘಟನೆ, ಎನ್.ಸಿ.ಸಿ.

<><><>

39ನೇ ದಕ್ಷಿಣ ಭಾರತ ವಲಯ, 'ಪೆಡಿಕಾನ್ 2025' ಹಾಗೂ 44ನೇ ಕರ್ನಾಟಕ ರಾಜ್ಯ ಪೀಡಿಯಾಟ್ರಿಕ್ ಮೂರು ದಿನಗಳ ಸಮ್ಮೇಳನ, ವಿಜಯಪುರದ ಬಿ.ಎಲ್.ಡಿ.ಇ. ಆವರಣದಲ್ಲಿ, ಇಂದು ಸಮಾರೋಪಗೊಳ್ಳಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ, ಎಕ್ಸ್ ಮಾಧ್ಯಮದಲ್ಲಿ ವಿಷಯ ತಿಳಿಸಿ, ಚಿಕ್ಕ ಮಕ್ಕಳ ತಜ್ಞ ವೈದ್ಯರು, ತಮ್ಮ ನವೀನ ವಿಚಾರಗಳು ಮತ್ತು ಕ್ಲಿನಿಕಲ್ ಅನುಭವಗಳನ್ನು ಹಂಚಿಕೊಂಡು, ಮಕ್ಕಳ ಆರೋಗ್ಯ ರಕ್ಷಣೆಯಲ್ಲಿ, ಪರಿಣಾಮಕಾರಿ ಪರಿಹಾರಗಳನ್ನು ನೀಡಲಿದ್ದಾರೆಂಬ ವಿಶ್ವಾಸವಿದೆ, ಎಂದಿದ್ದಾರೆ. ದಕ್ಷಿಣ ಭಾರತದ ಪ್ರಮುಖ ಬಾಲ ಆರೋಗ್ಯ ತಜ್ಞರು ಹಾಗೂ ನವಜಾತ ಶಿಶು ಆರೋಗ್ಯ ವಿಶೇ ‘ಜ್ಞರು ಒಂದೇ ವೇದಿಕೆಯಲ್ಲಿ ಸಮಾವೇಶಗೊಂಡಿರುವುದು, ಕರ್ನಾಟಕಕ್ಕೆ ಹೆಮ್ಮೆಯ ವಿ ‘ಯ, ಎಂದು ಸಚಿವರು ಹೇಳಿದ್ದಾರೆ.

<><><>

ಸರ್ದಾರ ವಲ್ಲಭ ಭಾಯಿ ಪಟೇಲರ, 150ನೇ ಜಯಂತ್ಯುತ್ಸವದ ಅಂಗವಾಗಿ, ರಾಷ್ಟ್ರೀಯ ಐಕ್ಯತಾ ಸಪ್ತಾಹ, ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ, ಜರುಗಿತು. ಕಾರಾಗೃಹದ ಮುಖ್ಯ ಅಧೀಕ್ಷಕಿ ಆರ್. ಅನಿತಾ, ಕಾರಾಗೃಹದ ಅಧಿಕಾರಿ ವರ್ಗ ಮತ್ತು ಸಿಬ್ಬಂದಿಗೆ, ರಾಷ್ಟ್ರೀಯ ಐಕ್ಯತಾ ಸಪ್ತಾಹದ, ಪ್ರಮಾಣ ವಚನ, ಬೋಧಿಸಿದರು.

<><><>

ಸಂಸದರ ಕ್ರೀಡಾ ಮಹೋತ್ಸವ ಪ್ರಯುಕ್ತ, ಇಂದು ಮಂಗಳೂರಿನ ಯು.ಎಸ್.ಮಲ್ಯ ಒಳಾಂಗಣ ಕ್ರೀಡಾಂಗಣದಲ್ಲಿ, 'ನಮೋ ಚೆಸ್ ಪಂದ್ಯಾವಳಿ' ಸಬ್ ಜ್ಯೂನಿಯರ್, ಜ್ಯೂನಿಯರ್ ಹಾಗೂ ಮುಕ್ತ ವಿಭಾಗದಲ್ಲಿ ನಡೆಯಲಿದೆ. ದಕ್ಷಿಣಕನ್ನಡ ಸಂಸದ ಬ್ರಿಜೇಶ್ ಚೌಟ ಮಾಹಿತಿ ನೀಡಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, 'ವಿಕಸಿತ ಭಾರತಕ್ಕಾಗಿ ಸುದೃಢ ಯುವಜನತೆ' ಪರಿಕಲ್ಪನೆಯಡಿ, ಈ ಕ್ರೀಡಾ ಮಹೋತ್ಸವ ಆಯೋಜಿಸಲಾಗಿದೆ. 500ಕ್ಕೂ ಹೆಚ್ಚು ಚೆಸ್‌ಪಟುಗಳು, ಈಗಾಗಲೇ ಹೆಸರು ನೋಂದಾಯಿಸಿದ್ದಾರೆ ಎಂದರು. ಇಂದಿನಿಂದ ಪ್ರತಿ ವಾರ, ಸಂಸದ್ ಖೇಲ್ ಮಹೋತ್ಸವ ಅಂಗವಾಗಿ, ವಾಲಿಬಾಲ್, ಥ್ರೋ ಬಾಲ್, ಕುಸ್ತಿ, ಕಬ್ಬಡ್ಡಿ, ಹಗ್ಗ ಜಗ್ಗಾಟ, ಕ್ರಿಕೆಟ್, ಬ್ಯಾಡ್ಮಿಂಟನ್ ಪಂದ್ಯಾಟಗಳನ್ನು ಆಯೋಜಿಸಲಾಗುವುದು ಎಂದು, ಸಂಸದ ಚೌಟ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮೆಕ್ಕೆಜೋಳ ಹಾಗೂ ಹೆಸರುಕಾಳು ಬೆಲೆಗಳಲ್ಲಿ, ತೀವ್ರ ಕುಸಿತ; ಪ್ರಧಾನಮಂತ್ರಿಯವರ ಮಧ್ಯ ಪ್ರವೇಶಕ್ಕೆ, ಮುಖ್ಯಮಂತ್ರಿ ಪತ್ರ ಮೂಲಕ, ಮನವಿ.
- ಕ್ರೀಡಾ ಯೋಗ; ಬೆಂಗಳೂರಿನ, ನಿಮ್ಹಾನ್ಸ್ ವತಿಯಿಂದ, ಶಾಲಾ ಮಕ್ಕಳಿಗಾಗಿ, ವಿಶೇಷ ಪ್ರಯೋಗ.
- ಧಾರವಾಡದ, ಡಿ.ವಿ. ಹಾಲಭಾವಿ ರಾಷ್ಟ್ರೀಯ ಟ್ರಸ್ಟ್, ಕಲಾತಪಸ್ವಿ ಪ್ರಶಸ್ತಿಗೆ, ಹಿರಿಯ ಕಲಾವಿದ ಬಿ.ಜಿ ಗುಜ್ಜಾರಪ್ಪ, ಆಯ್ಕೆ.
- ಎನ್.ಸಿಸಿ., ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್, 78ನೇ ಸಂಸ್ಥಾಪನಾ ದಿನಾಚರಣೆ, ಇಂದು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>